ಓ.ಎಸ್. ನಂ. **93/2021** ಪಿ.ಡಬ್ಲ್ಯೂ 3

**ದಿನಾಂಕಃ 18.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : 2 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರಿಂದಃ**

1. ಈ ದಿನ ಕೋರ್ಟಿಗೆ ಬರಬೇಕೆಂದು ನನಗೆ ಯಾರು ತಿಳಿಸಿದರು? ಎಂದರೆ ನನ್ನ ಅಳಿಯ 2 ನೇ ವಾದಿ ಗೋಣೆಪ್ಪ ತಿಳಿಸಿದ್ದ. ಈ ದಾವೆಯನ್ನು ನನ್ನ ಅಳಿಯಂದಿರಾದ ವಾದಿಗಳು ಅವರ ತಂದೆಯ ಜಮೀನಿನಲ್ಲಿ ಅವರ ಭಾಗ ಬರಬೇಕೆಂದು ನಡುವಿನಹಳ್ಳಿಯವರ ವಿರುದ್ಧ ಸಲ್ಲಿಸಿದ್ದಾರೆ. ಈ ದಾವೆಯ ದಾವಾ ಸ್ವತ್ತುಗಳನ್ನು ನಾನು ನೋಡಿರುವುದಿಲ್ಲ. 30 ವರ್ಷಗಳ ಹಿಂದೆ ಡಿಳ್ಳೆಪ್ಪನಿಗೆ 3 ಎಕರೆ ಜಮೀನು ಕೊಟ್ಟಿದ್ದರು ಎಂದರೆ ಸರಿಯಲ್ಲ. 30 ವರ್ಷಗಳ ಹಿಂದೆಯೇ ಡಿಳ್ಳೆಪ್ಪನ ಹಿಸ್ಸೆಯಾಗಿ ಆತನ ಅಣ್ಣ-ತಮ್ಮಂದಿರು ಆತನಿಗೆ 3 ಎಕರೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಕೊಟ್ಟ ಬಗ್ಗೆ ಸಾಕ್ಷಿಗಳು ಇರಬೇಕಲ್ಲ? ಎಂದು ಪ್ರಶ್ನೆ ಮಾಡಿದ್ದಾರೆ. 3 ಎಕರೆ ಕೊಟ್ಟ ಕೂಡಲೇ ಡಿಳ್ಳೆಪ್ಪನು ಅದನ್ನು ಶಿವಮೂರ್ತಪ್ಪನಿಗೆ ಮಾರಾಟ ಮಾಡಿದ್ದನು ಎಂದರೆ ಜಮೀನು ಕೊಟ್ಟೂ ಇಲ್ಲಾ ಮತ್ತು ಡಿಳ್ಳೆಪ್ಪ ಅದನ್ನು ಮಾರಾಟ ಮಾಡಿಯೂ ಇಲ್ಲ. ಡಿಳ್ಳೆಪ್ಪ ಈಗಾಗಲೇ ಆತನ ಹಿಸ್ಸೆಗೆ 3 ಎಕರೆ ಪಡೆದುಕೊಂಡಿರುವ ಕಾರಣ ಡಿಳ್ಳೆಪ್ಪನಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಿಸ್ಸೆಯ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

2. ಡಿಳ್ಳೆಪ್ಪನಿಗೆ ಸುಮಾರು 40-50 ವರ್ಷಗಳ ಹಿಂದೆ ಮದುವೆಯಾಗಿತ್ತು. ಆಗ ನಾನು 12 ವರ್ಷ ವಯಸ್ಸಿನವನಿದ್ದೆ. ಡಿಳ್ಳೆಪ್ಪನ ಮದುವೆ ನಮ್ಮ ಮನೆಯ ಮುಂಭಾಗದಲ್ಲೇ ಇದ್ದ ಹೆಣ್ಣು ದೇವತೆಯ ಗುಡಿಯ ಮುಂದೆ ನಡೆದಿತ್ತು. ವಾದಿಗಳು ನನ್ನ ಒಡ ಹುಟ್ಟಿದ ಅಕ್ಕನ ಮಕ್ಕಳಾಗಿರುವ ಕಾರಣ ನನಗೆ ಅಳಿಯಂದಿರು ಇರುತ್ತಾರೆ. ವಾದಿಗಳು ಡಿಳ್ಳೆಪ್ಪನ ಮಕ್ಕಳಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಲ್ಲಿ ವಾದಿಗಳಿಗೆ ಯಾವುದೇ ಹಕ್ಕು ಇಲ್ಲವೆಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಯಿಸಿದ್ದೇನೆ . ಅದರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲವೆಂದರೆ ನಾನು ಹೇಳಿದ ಪ್ರಕಾರವೇ ಬರೆದಿದ್ದಾರೆ. ನನ್ನ ಅಳಿಯಂದಿರಾದ ವಾದಿಗಳಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**

**ದಿನಾಂಕಃ 18.10.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲು : 2 ಮತ್ತು 3 ನೇ ಪ್ರತಿವಾದಿಗಳ ಪರ ವಕೀಲರಿಂದಃ**

1. ಈ ದಾವೆಯನ್ನು ವಾದಿಗಳು ಅವರ ಅಣ್ಣ-ತಮ್ಮಂದಿರ ವಿರುದ್ಧ ಸಲ್ಲಿಸಿದ್ದಾರೆ. ನನ್ನ ಸ್ವಂತ ಊರು ಹರಪನಹಳ್ಳಿ ತಾಲ್ಲೂಕಿನ ಕೋಡಿಹಳ್ಳಿ ಇರುತ್ತದೆ. ದಾವಾ ಸ್ವತ್ತುಗಳು ಎಲ್ಲಿರುತ್ತವೆ ಎಂಬುದನ್ನು ನಾನು ನೋಡಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಸಂಗತಿಗಳನ್ನು ಯಾರು ಹೇಳಿ ಬರೆಯಿಸಿದರು? ಎಂದರೆ ವಾದಿಗಳೇ ಹೇಳಿ ಬರೆಯಿಸಿದರು. ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲವೆಂದರೆ ಸರಿ.

2. ಡಿಳ್ಳೆಪ್ಪನನ್ನು ನಾನು ನೋಡಿದ್ದೆ, ಅವರು ನಮ್ಮ ಕೋಡಿಹಳ್ಳಿಯಲ್ಲೇ ಮದುವೆಯಾಗಿದ್ದರು. ಡಿಳ್ಳೆಪ್ಪನಿಗೆ 30 ವರ್ಷಗಳ ಹಿಂದೆಯೇ ದಾಸನಹಳ್ಳಿ ಗ್ರಾಮಕ್ಕೆ ಸಂಬಂಧಪಟ್ಟ 3 ಎಕರೆ ಜಮೀನು ಕೊಟ್ಟಿದ್ದರು ಎಂದರೆ ಸರಿ. ಡಿಳ್ಳೆಪ್ಪ ಸದರಿ 3 ಎಕರೆ ಜಮೀನನ್ನು ಶಿವಮೂರ್ತಪ್ಪನಿಗೆ ಮಾರಾಟ ಮಾಡಿದ್ದನು ಎಂದರೆ ಸರಿ. ಸದರಿ 3 ಎಕರೆ ಜಮೀನಿನಲ್ಲಿ ಈಗ ಶಿವಮೂರ್ತಪ್ಪನೇ ಸ್ವಾಧೀನ ಹೊಂದಿದ್ದಾರೆ ಎಂದರೆ ನಾನು ಆ ಜಮೀನನ್ನು ನೋಡಿಲ್ಲ, ನನಗೆ ಯಾರು ಸ್ವಾಧೀನ ಹೊಂದಿದ್ದಾರೆಂದು ಗೊತ್ತಿಲ್ಲ. ಡಿಳ್ಳೆಪ್ಪನು ಸುಮಾರು 50 ವರ್ಷಗಳ ಹಿಂದೆ ನಮ್ಮ ಊರಿನ ಚೌಡಮ್ಮನ ದೇವಸ್ಥಾನದಲ್ಲಿ ಗಂಗಮ್ಮಳನ್ನು ಮದುವೆಯಾಗಿದ್ದ. ನಾನು ಆ ಮದುವೆಯಲ್ಲಿ ಹಾಜರಾಗಿ ಅಕ್ಷತೆ ಕಾಳು ಹಾಕಿದ್ದೆ. ಡಿಳ್ಳೆಪ್ಪ ಗಂಗಮ್ಮಳನ್ನು ಮದುವೆಯಾಗಿದ್ದನೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗಳು ಡಿಳ್ಳೆಪ್ಪನ ಮಕ್ಕಳಲ್ಲ ಎಂದರೆ ಡಿಳ್ಳೆಪ್ಪನ ಮಕ್ಕಳೇ ಇರುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾದಿಗಳ ಜೊತೆ ಆತ್ಮೀಯನಾಗಿ ಇರುವ ಕಾರಣ ಈ ದಾವೆಯ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಹೂವಿನ ಹಡಗಲಿ.**